**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ಸಂಧ್ಯಾ ಮಹಾವಿದ್ಯಾಲಯದ ಪ್ರವೇಶಕ್ಕೆ ಬೇಕಾದ ಶೈಕ್ಷಣಿಕ ಯೋಗ್ಯತೆಗಳು

1. ಪಿ.ಯು.ಸಿ, ಸಾಹಿತ್ಯ, ಅಥವಾ ತತ್ಸಮಾನ ತರಗತಿಗಳಲ್ಲಿ ಸಂಸ್ಕೃತವನ್ನು ಭಾಷೆಯಾಗಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಸಂಸ್ಕೃತ ಬಿ.ಎ ತರಗತಿಗಳಲ್ಲಿ ದಾಖಲಾತಿ ಹೊಂದಲು ಯೋಗ್ಯರಾಗಿರುತ್ತಾರೆ.
2. ಸಂಸ್ಕೃತರಹಿತ ಪದವಿ ಪೂರ್ವ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ದಾಖಲಾತಿ ಪಡೆದ ನಂತರದ ಪ್ರಾರಂಭದ 2 ತಿಂಗಳುಗಳ ಕಾಲ ಸೇತು ಬಂಧ ತರಗತಿಗಳನ್ನು ನಡೆಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ವಾರ್ಷಿಕ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು. ಪ್ರವೇಶ ಪರೀಕ್ಷೆಯಲ್ಲಿ ಅನುತ್ತೀರ್ಣರಾದವರಿಗೆ ಪ್ರವೇಶ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ.
3. ಯಾವುದೇ ವಿಶ್ವವಿದ್ಯಾಲಯದ ಸಂಸ್ಕೃತ ಡಿಪ್ಲೊಮಾ ಅಥವಾ ಯಾವುದೇ ಇತರ ವಿಷಯದಲ್ಲಿ ಸ್ನಾತಕ ಸ್ನಾತಕೋತ್ತರ ಪದವಿ ಪಡೆದಿದ್ದರೆ ಸಂಸ್ಕೃತ ಬಿ. ಎ ಪದವಿ ತರಗತಿಗೆ ದಾಖಲಾತಿ ಹೊಂದಬಹುದಾಗಿದೆ.
4. ಈಗಾಗಲೇ ಮಹಾವಿದ್ಯಾಲಯದಲ್ಲಿ ದಾಖಲಾತಿ ಹೊಂದಿದ ವಿದ್ಯಾರ್ಥಿಗಳು ಹಿಂದಿನ ತರಗತಿಗಳಲ್ಲಿ ಅನುತ್ತೀರ್ಣರಾದವರು ಅಥವಾ ಪರೀಕ್ಷೆಗೆ ಹಾಜರಾಗದೇ ಇದ್ದ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ಪರೀಕ್ಷೆಯ ಜೊತೆ ಹಿಂದಿನ ತರಗತಿಯ ಪರೀಕ್ಷೆಯನ್ನೂ ಬರೆಯಬಹುದಾಗಿದೆ. ಆದರೆ ಈ ಅವಕಾಶವು ಪದವಿಯ ಅಂತಿಮ ವರ್ಷದವರೆಗೆ ಮಾತ್ರ ಸೀಮಿತವಾಗಿರುತ್ತದೆ. ಪದವಿ ಅಂತಿಮ ವರ್ಷದಲ್ಲಿ ಉಳಿದ ಎಲ್ಲಾ ತರಗತಿಯ ಎಲ್ಲಾ ವಿಷಯಗಳಲ್ಲೂ ತೇರ್ಗಡೆ ಹೊಂದಿರಬೇಕು.